ಸರ್ಕಾರದ ಗಮನ ಸೆಳೆಯುತ್ತಾ ಇದಕ್ಕೆ ಮಾನ್ಯ ಮುಖ್ಯ ಮಂತ್ರಿಗಳಿಂದ ಸದನದಲ್ಲಿ ಉತ್ತರವನ್ನು ಬಯಸುತ್ತೇನೆ.

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೇ ಸನ್ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಮಾಡುತ್ತೇನೆ. ಬೆಳಗಾಂ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಕಾಮತ್‌ನೋರು ಬಳಿ ಸಣ್ಣ ನೀರಾವರಿ ಕೆರೆ ಕಟ್ಟುವ ಕಾಮಗಾರಿ 1992-93ನೇ ಸಾಲಿನ ಆಯವ್ಯಯದಲ್ಲಿ 60 ಲಕ್ಷ ರೂಪಾಯಿಗಳ ಅಂದಾಜಿನೊಂದಿಗೆ ಸೇರಿದೆ. ಈ ಕಾಮಗಾರಿಯ 196.55 ಲಕ್ಷ ರೂಪಾಯಿಗಳ ವಿವರವಾದ ಅಂದಾಜು ಪಟ್ಟಿಗೆ ಸರ್ಕಾರಿ ಆದೇಶ ಸಂಖ್ಯೆ ನೀಇ 89 ಸನಬಿ 78 ದಿನಾಂಕ 21-10-92ರಂದು ಈ ಕೆಳಕಂಡ ಕೆಲಸಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿತ್ತು.

1) ಮುಖ್ಯ ಅಭಿಯಂತರರು, ಸಣ್ಣ ನೀರಾವರಿ ಬೆಂಗಳೂರು ಇವರು ಸದರಿ ಡಿವಿಜನ್‌ಗೆ ತಾಂತ್ರಿಕ ಮಂಜೂರಾತಿ ನೀಡುವ ಮೊದಲು ತಾಂತ್ರಿಕ ಸಮಿತಿಯ ಮುಂದೆ ಮಂಡಿಸಿ ಅನುಮೋದನೆ ಪಡೆಯುವುದು.

2) ನಿವೇದನೆಗೆ ತಾಂತ್ರಿಕ ಸಮಿತಿಯ ಅನುಮೋದನೆ ಪಡೆದ ನಂತರ ಕಾಮಗಾರಿಗಳನ್ನು ಕೈಗೊಳ್ಳುವ ಆಯಾ ವರ್ಷಗಳ ದರ ಪಟ್ಟಿಯ ದರದಂತೆ ಹಾಗೂ ಶೇಕಡ 10ರಂತೆ ಹೆಚ್ಚುವರಿ ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ ಇವರಿಗೆ ವಹಿಸತಕ್ಕದ್ದು. ಈ ಕೆರೆ ಕಾಮಗಾರಿಕೆಗೆ ಬೇಕಾಗಿರುವ ಭೂಸ್ವಾಧೀನಕ್ಕಾಗಿ ಈಗಾಗಲೇ 23.27 ಲಕ್ಷ ರೂಪಾಯಿಗಳನ್ನು ಕಂದಾಯ ಇಲಾಖೆಗೆ ಪಾವತಿ ಮಾಡಲಾಗಿದೆ. ಆದರೆ ಈ ಕೆರೆಯ ಅಂದಾಜು ಮೊತ್ತ 100 ಲಕ್ಷ ರೂಪಾಯಿಗಳು ಮೀರಿರುವುದರಿಂದ ನಿಯಮಾವಳಿ ಪ್ರಕಾರ ತಾಂತ್ರಿಕ ಸಮಿತಿಯ ಒಪ್ಪಿಗೆ ಪಡೆಯಬೇಕಿತ್ತು. ಈ ಕಾರಣ ಈ ಅಂದಾಜು ಪಟ್ಟಿಯನ್ನು ದಿನಾಂಕ 21-12-92ರಂದು ನಡೆದ ಕೃಷ್ಣಾ ಗೋದಾವರಿ ಜಲಾಯನ ಯೋಜನೆಗಳ ತಾಂತ್ರಿಕ ಸಮಿತಿಯಲ್ಲಿ ಮಂಡಿಸಲ್ಪಟ್ಟಿದ್ದು ಸಮಿತಿಯು ಪ್ರಸ್ತಾವನೆಯನ್ನು ಜಲ ವಿಜ್ಞಾನ ಜಲ ಸಂಪರ್ಕ ಅಭಿವೃದ್ಧಿ ಸಂಸ್ಥೆ ಬೆಂಗಳೂರು ಇವರಿಂದ ಧೃಢೀಕರಿಸಿಕೊಡಬೇಕೆಂದು ತೀರ್ಮಾನಿಸಿದ್ದು ಅದರಂತೆ ಸಂಬಂಧಪಟ್ಟ ಮುಖ್ಯ ಅಭಿಯಂತರಿಗೆ ಆದೇಶ ನೀಡಲಾಗಿದೆ. ಈ ಬಗ್ಗೆ ಕ್ರಮ ಕೈಗೊಂಡು ಮುಂದಿನ ತಾಂತ್ರಿಕ ಸಮಿತಿಯ ಸಭೆಯಲ್ಲಿ ಪರಿಶೀಲಿಸಿ ಸರ್ಕಾರದ ಆದೇಶದಲ್ಲಿ ಸೂಚಿಸಿರುವಂತೆ ಷರತ್ತಿನ ಮೇರೆಗೆ ಕ್ರಮ ಕೈಗೊಳ್ಳಲಾಗಿದೆ.

ರಾಜ್ಯದಲ್ಲಿ ಇತ್ತೀಚೆಗೆ ಉಂಟಾದ ಮಳೆ ಹಾಗೂ ನೆರೆ ಹಾವಳಿ ಬಗ್ಗೆ ಚರ್ಚೆ

ಛೇರ್ಮನ್ : ಇತ್ತೀಚೆಗೆ ರಾಜ್ಯದಲ್ಲಿ ಉಂಟಾದ ಮಳೆ ಹಾಗೂ ನೆರೆ ಹಾವಳಿಯ ಬಗ್ಗೆ ಚರ್ಚೆಯನ್ನು ಪ್ರಾರಂಭಿಸಬಹುದು.

ಶ್ರೀ ಹೆಚ್ ಏಕಾಂತಯ್ಯ : ಮಾನ್ಯ ಅಧ್ಯಕ್ಷಿಣಿಯವರೆ, ಇವತ್ತು ಶುಕ್ರವಾರವಾದ್ದರಿಂದ ನಾನು ತಮ್ಮ ಅನುಮೋದನೆಯನ್ನು ಕೋರಿ ಒಂದು ಪ್ರಸ್ತಾವನೆಯನ್ನು ಹೇಳುವುದಕ್ಕೆ....

ಛೇರ್ಮನ್ : ಶೂನ್ಯ ವೇಳೆ ಮುಗಿದು ಹೋಗಿದೆ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ